**ಸಿಸಿ ನಂಃ 2312/2024**

**ಪಿ. ಡಬ್ಲ್ಯು 1**

**(ಇಂದು ದಿನಾಂಕಃ 27-02-2026 ರಂದು ಪಿ.ಡಬ್ಲ್ಯು.1 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು ಃ ಆರೋಪಿ ಪರ ವಕೀಲರಾದ ಶ್ರೀ ಪಿ.ಜಿ.ಪಿ. ರವರಿಂದಃ**

ನಿಪಿ. 5 ಮತ್ತು 6 ರಲ್ಲಿ ನಿಮ್ಮ ಸಂಘದ ಮ್ಯಾನೇಜಿಂಗ್ ಡೈರೆಕ್ಟರ್ ರವರ ಸಹಿ ಹೊರತು ಪಡಿಸಿ ಬೇರೆ ಯಾರ ಸಹಿ ಇರುವುದಿಲ್ಲ ಎಂದರೆ ಸರಿ. ಮ್ಯಾನೇಜಿಂಗ್ ಡೈರೆಕ್ಟರ್ ರವರು ಆಡಳಿತ ಮಂಡಳಿಯ ಸದಸ್ಯರೇ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ನಿಮ್ಮ ಸಂಘದ ಆಡಳಿತ ಮಂಡಳಿಯಲ್ಲಿ ಒಟ್ಟು ಎಷ್ಟು ಮಂದಿ ಸದಸ್ಯರು ಇದ್ದಾರೆ ಎಂದರೆ ಸಾಕ್ಷಿ 14 ಮಂದಿ ಸದಸ್ಯರು ಇದ್ದಾರೆ ಎಂದು ಉತ್ತರಿಸುತ್ತಾರೆ. ಆಡಳಿತ ಮಂಡಳಿಯಲ್ಲಿ ಹೊರಡಿಸಲಾದ ಠರಾವಿಗೆ 14 ಮಂದಿ ಸದಸ್ಯರು ಸಹಿ ಮಾಡಿದ್ದಾರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಸದರಿ 14 ಮಂದಿ ಸದಸ್ಯರು ಸಹಿ ಮಾಡಿರುವ ಠರಾವು ಮೂಲ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿ. ಅದನ್ನು ಹಾಜರುಪಡಿಸಲುನಿಮಗೆ ತೊಂದರೆ ಇರುವುದಿಲ್ಲ ಎಂದರೆ ಸರಿ. ಅದನ್ನು ಹಾಜರುಪಡಿಸದೇ ನಿಪಿ. 5 ನ್ನು ಹಾಜರುಪಡಿಸಿರುವುದು ತಪ್ಪು ಎಂದರೆ ಸರಿಯಲ್ಲ . ನಿಪಿ. 5 ಮತ್ತು 6 ನ್ನು ನಿಮ್ಮ ಸಂಘದ ಆಡಳಿತ ಮಂಡಳಿಯಲ್ಲಿ ಆದ ಠರಾವಿನ ಪ್ರಕಾರ ಆದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿಮ್ಮ ಸಂಘದ ಆಡಳಿತ ಮಂಡಳಿಯ ಸದಸ್ಯರ ಈ ಪ್ರಕರಣವನ್ನು ದಾಖಲಿಸಲು ನಿಮಗೆ ಅಧಿಕಾರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನೀವು ಹಾಗೂ ನಿಮ್ಮ ಸಂಘದ ಮ್ಯಾನೆಜಿಂಗ್ ಡೈರೆಕ್ಟರ್ ಸೇರಿಕೊಂಡು ಈ ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ.

2. ದಿನಾಂಕ 01.01.2022 ರಂದು ಆರೋಪಿ ನಮ್ಮ ಸಂಘಕ್ಕೆ ಸಾಲ ಕೇಳಿ ಬಂದಿದ್ದರು. ದಿನಾಂಕ 01.01.2022 ರಂದು ಅವರು ಸಾಲ ಕೇಳಿ ನಿಮ್ಮ ಸಂಘಕ್ಕೆ ಬಂದಿರುವ ವಿಷಯವನ್ನು ನಿಪಿ. 3 ರಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಇಸವಿಯನ್ನು ನಮೂದಿಸಿರುತ್ತಾರೆ ಎಂದು ಉತ್ತರಿಸುತ್ತಾರೆ.

3. ಆರೋಪಿಗೆ ಯಾವಾಗ ಸಾಲ ಕೊಟ್ಟಿದ್ದೀರಿ ಎಂದರೆ ದಿನಾಂಕ 27.02.2022 ರಂದು ಸಾಲ ಕೊಟ್ಟಿದ್ದೇವೆ ಅಂತಾ ಉತ್ತರಿಸುತ್ತಾರೆ. ಆರೋಪಿಗೆ ದಿನಾಂಕ 27.02.2022 ರಂದು ಸಾಲ ಕೊಟ್ಟ ಬಗ್ಗೆ ನಿಪಿ.3 ರಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ವಕೀಲರ ನೋಟಿಸಿನಲ್ಲಿ ಇಸವಿ ಮಾತ್ರ ನಮೂದು ಇದೆ ಅಂತಾ ಉತ್ತರಿಸುತ್ತಾರೆ. ಸದರಿ ವಿಷಯವನ್ನು ನಮ್ಮ ವಕೀಲರಿಗೆ ಹೇಳಿದ್ದೆನೆ. ಅರೋಪಿ ಸಾಲ ಪಡೆದುಕೊಂಡ ನಂತರ ಸಾಲಕ್ಕೆ ಎಷ್ಟು ಹಣ ತುಂಬಿರುತ್ತಾರೆ ಎಂದರೆ ಸಾಕ್ಷಿ ರೂ. 3,000/- ಮಾತ್ರ ತುಂಬಿರುತ್ತಾರೆ ಅಂತಾ ಉತ್ತರಿಸುತ್ತಾರೆ.

**ಸಿಸಿ ನಂಃ 2312/2024**

**ಪಿ. ಡಬ್ಲ್ಯು 1**

4. ಆರೋಪಿಗೆ ಸಾಲ ಬಿಪಿಡುಗಡೆ ಮಾಡುವ ಸಮಯದಲ್ಲಿ ಏನೆಲ್ಲಾ ದಾಖಲೆಗಳನ್ನು ಪಡೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಮೂರು ಜಾಮೀನುದಾರರು, ಶೇರು ಹಾಗೂ ಎಫ್.ಡಿ. ಹಣವನ್ನು ಪಡೆದುಕೊಂಡಿದ್ದೇವೆ ಅಂತಾ ಉತ್ತರಿಸುತ್ತಾರೆ.

5. 2022 ರಲ್ಲಿ ನೀವು ಸಂಘದಲ್ಲಿ ರಿಕವರಿ ಆಫೀಸರ್ ಆಗಿರಲಿಲ್ಲ ಎಂದರೆ ಸರಿ.

6. ಸಾಲ ಬಿಡುಗಡೆ ಮಾಡುವ ಸಮಯದಲಿಲ ಆರೋಪಿಯಿಂದ ಸಾಲದ ಭದ್ರತೆಗಾಗಿ ಕೆಲವೊಂದು ಚೆಕ್ ಗಳನ್ನು ಹಾಗೂ ಕೆವೈಸಿ ದಾಖಲೆಗಳನ್ನು ತೆಗೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಕೆವೈಸಿ ದಾಖಲೆಗಳನ್ನು ಮಾತ್ರ ತೆಗೆದುಕೊಂಡಿದ್ದು ಚೆಕ್ ಗಳನ್ನು ತೆಗೆದುಕೊಂಡಿಲ್ಲ ಅಂತಾ ಉತ್ತರಿಸುತ್ತಾರೆ.

7. ನಿಪಿ. 3 ನೋಟಿಸು ಕೊಡುವ ಸಮಯದಲ್ಲಿ ಸಾಲದ ಖಾತೆಗೆ ಸಂಬಂಧಿಸಿದಂತೆ ಎಷ್ಟು ಕಂತುಗಳು ಕಟ್ಟು ಬಾಕಿ ಇದ್ದವು ಎಂಬ ಬಗ್ಗೆ ನಿಪಿ. 3 ರಲ್ಲಿ ನಮೂದು ಇಲ್ಲ ಎಂದರೆ ಸಾಕ್ಷಿ ಕುಟ್ಟು ಬಾಕಿ ಮೊತ್ತ ನಮೂದು ಮಾಡಿದ್ದು ಎಷ್ಟು ಕಂತುಗಳು ಬಾಕಿ ಇದ್ದವು ಎಂಬುದನ್ನು ನಮೂದು ಮಾಡಿಲ್ಲ ಅಂತಾ ಉತ್ತರಿಸುತ್ತಾರೆ. ಸಾಲ ಕಟ್ಟು ಬಾಕಿ ಆಗಿರುವ ಬಗ್ಗೆ ನಿಪಿ. 3 ರಲ್ಲಿ ನಮೂದು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

8. ಜಾಮೀನುದಾರರ ವಿರುದ್ಧ ಸಾಲ ವಸೂಲಾತಿಗಾಗಿ ಏನಾದರೂ ಕ್ರಮಗಳನ್ನು ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ನೋಟಿಸು ಕೊಟ್ಟಿದ್ದೇವೆ ಅಂತಾ ಉತ್ತರಿಸುತ್ತಾರೆ. ಅವರಿಗೆ ನೋಟಿಸು ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನೀವು ಜಾಮೀನುದಾರಿಗೆ ಯಾವುದೇ ನೋಟಿಸು ಕೊಟ್ಟಿಲ್ಲ ಅಂದರೆ ಸರಿಯಲ್ಲ.

9. ಆರೋಪಿ ಈ ಹಿಂದೆ ಭದ್ರತೆಗಾಗಿ ಕೊಟ್ಟ ಚೆಕ್ ನ್ನು ದುರುಪಯೋಗಪಡಿಸಿಕೊಂಡು ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.1 ರ ಚೆಕ್ ನಲ್ಲಿ ನಮೂದಿಸಿರುವ ಮೊಬಲಗಿನ ಹಣ ಅರೋಪಿಯಿಂದ ಕಾನೂನು ಸಮ್ಮತವಾಗಿ ವಸೂಲು ಮಾಡತಕ್ಕ ಹಣ ಆಗಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

ಸಿಸಿ ನಂಃ 2312/2024

ಪಿ. ಡಬ್ಲ್ಯು 1

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ